PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 4, JAN-FEB 2021, 56-60

www.iimrd.com

# ಶಿಕ್ಷಣ ಮಾಧ್ಯಮವಾಗಿ ಕನ್ನಡ: ವರ್ತಮಾನದ ಆತಂಕಗಳು

ಶೆಲ್ವಿ ಬಾಲಕೃಷ್ಣನ್ ಎಂ.[1]

**ಪೀಠಿಕೆ**

ಯಾವುದೇ ಒಂದು ಭಾಷೆ ಹೆಚ್ಚಾಗಿ ಬಳಸುವ ಮುಖೇನ ತನ್ನದೇ ಆದ ವಿಶಿಷ್ಟವಾದ ಸ್ಥಾನಮಾನವನ್ನು ಉಳಿಸಿಕೊಳ್ಳುತ್ತದೆ. ಶಿಕ್ಷಣ ಮಾಧ್ಯಮವಾಗಿ ಕನ್ನಡದ ಸ್ಥಿತಿಯನ್ನು ಒಳಹೊಕ್ಕು ನೋಡಿದಾಗ ಇತ್ತೀಚಿನ ದಿನಗಳಲ್ಲಿ ತಾಯ್ನಾಡಿನ ಭಾಷೆಯಾದ, ಮಾತೃಭಾಷೆಯಾದ ಹಾಗೂ ಕರ್ನಾಟಕ ರಾಜ್ಯದ ಆಡಳಿತ ಭಾಷೆಯಾದ ಕನ್ನಡದ ಬಳಕೆಗೆ ಇತರೆ ಭಾಷೆಗಳ ಮೋಹದಿಂದಾಗಿ ಕಡಿಮೆಯಾಗುತ್ತಿದೆ. ಶಿಕ್ಷಣ ಮಾಧ್ಯಮ ಎಂದರೆ ಶಿಕ್ಷಣ ನೀಡಲು ಬಳಸುವ ಮಾಧ್ಯಮ, ಭಾಷಾರಹಿತ ಮಾಧ್ಯಮಗಳ ಬಳಕೆ ಶಿಕ್ಷಣದ ಕೆಲವು ಸನ್ನಿವೇಶಗಳಲ್ಲಿ ಇದ್ದರೂ ಭಾಷೆಯನ್ನು ಪರಿಗಣಿಸದೆ ಶಿಕ್ಷಣದ ಬಗ್ಗೆ ಆಲೋಚಿಸಲು ಸಾಧ್ಯವಿಲ್ಲ ಎಂದೇ ಬೋಧನ ಮಾಧ್ಯಮವನ್ನು ಶಿಕ್ಷಣ ಮಾಧ್ಯಮಕ್ಕೆ ಸಮಾನಾರ್ಥಕವಾಗಿ ಬಳಸುವುದು ವಾಡಿಕೆ. ಭಾಷೆಗಳನ್ನು ಹೊರತುಪಡಿಸಿ ಉಳಿದ ವಿಷಯಗಳನ್ನು ಬೋಧಿಸಲು ಬಳಸುವ ಭಾಷೆಯೇ ಬೋಧನ ಮಾಧ್ಯಮ.

ಕನ್ನಡ ಮಾಧ್ಯಮ ಸಂಪೂರ್ಣವಾಗಿ ಯಶಸ್ವಿಯಾಗಿ ಪ್ರತಿಷ್ಠಾಪಿತವಾಗುವ ತನಕ ಕನ್ನಡಿಗರಿಗೆ ಉದ್ಧಾರವಿಲ್ಲ, ಮೋಕ್ಷವಿಲ್ಲ, ಇಂಗ್ಲೀಷ್‌ನ ಮೂಲಕ ಪಡೆಯುವ ಶಿಕ್ಷಣ ಗಾಳಿಗೋಪುರವಲ್ಲದೆ ಮತ್ತೇನು ಆಗಲಾರದು. ಎಂಬ ರಾಷ್ಟ್ರಕವಿ ಕುವೆಂಪುರವರ ವಿಚಾರಧಾರಣೆಯನ್ನು ಈ ಸಂದರ್ಭದಲ್ಲಿ ನೆನೆಯುತ್ತಾ ಇತ್ತೀಚೆಗೆ ಪ್ರಾಥಮಿಕ ಪಾಠಶಾಲೆಗಳಲ್ಲಿನ ವಿದ್ಯಾಭ್ಯಾಸದ ಕಡೆ ಕಣ್ಣು ಹೊರಳಿಸಿದಾಗ ಕನ್ನಡ ಮಾಧ್ಯಮಕ್ಕಿಂತ ಆಂಗ್ಲ ಮಾಧ್ಯಮದಲ್ಲಿ ವಿದ್ಯಾಭ್ಯಾಸವನ್ನು ಪಡೆದುಕೊಳ್ಳಲು ಪ್ರತಿಯೊಬ್ಬರು ಹಾತೊರೆಯುತ್ತಿರುವುದು ಹೆಚ್ಚಾಗಿ ಕಂಡು ಬರುತ್ತಿದೆ ಹಾಗೂ ಕನ್ನಡ ಭಾಷೆಯನ್ನು ನಿರ್ಲಕ್ಷಿಸುತ್ತಿರುವುದು ವರ್ತಮಾನದ ಆತಂಕಗಳಲ್ಲಿ ಮೊದಲ ಪಟ್ಟಿಯಲ್ಲಿರುವುದು ಎಂಬುದು ಗಮನಾರ್ಹವಾದ ಅಂಶವಾಗಿರುತ್ತದೆ.

2500 ವರ್ಷಗಳ ಇತಿಹಾಸವಿರುವ ನಮ್ಮ ಕನ್ನಡ ಭಾಷೆ ಹಾಗೂ ಪ್ರತಿಯೊಬ್ಬ ಕನ್ನಡಿಗರು ಹೆಮ್ಮೆಯಿಂದ ಎದೆಯನ್ನು ತಟ್ಟಿ ಹೇಳಲೇಬೇಕಾದ ಅಂಶವೇನೆಂದರೆ ಎಂಟು ಜ್ಞಾನಪೀಠ

---

[1] *ಕನ್ನಡ ಪ್ರಾಧ್ಯಾಪಕರು, ವಿಶ್ವ ಚೇತನ ಪದವಿ ಕಾಲೇಜು, ಆನೇಕಲ್.*

ಪುರಸ್ಕಾರವು ಅದು ನಮಗೆ ಅಂದರೆ ಕನ್ನಡಿಗರಿಗೆ ಮಾತ್ರ ದೊರೆತಿರುತ್ತದೆ. ಒಮ್ಮೆ ಮಹಾತ್ಮಗಾಂಧಿಯವರು ಅನುಯಾಯಿ ಆದ ವಿನೋಭಾ ಭಾವೆಯವರು ಕನ್ನಡದ ಅಕ್ಷರಗಳನ್ನು ಕೂಲಂಕುಷವಾಗಿ ಗಮನಿಸುವ ಮೂಲಕ **"ಲಿಪಿಗಳ ರಾಣಿ"** ಎಂದರೆ ಅದು ಕನ್ನಡ ಮಾತ್ರ ಎಂದಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಕನ್ನಡ ಭಾಷೆಯು ತನ್ನದೇ ಆದ ಸ್ಥಾನಮಾನವನ್ನು ಹೊಂದಿದ್ದು, ಆಡಳಿತ ಭಾಷೆಯಾಗಿ ವಿಶಿಷ್ಟತೆಯನ್ನು ಪಡೆದುಕೊಂಡಿದೆ.

ಆದರೆ ಇತ್ತೀಚಿನ ದಿನಗಳಲ್ಲಿ ಆಂಗ್ಲ ಭಾಷೆಯ ಮೋಹ ಅತಿಯಾಗುತ್ತಿರುವ ಕಾರಣಗಳಿಂದ ತಂದೆ–ತಾಯಿಗಳು ಕೂಡ ತಮ್ಮ ಮಕ್ಕಳನ್ನು ಆಂಗ್ಲ ಭಾಷೆಯಲ್ಲಿಯೇ ಮಾತನಾಡುವಂತೆ ಹೇಳುವುದಾಗಿರಬಹುದು ಅಥವಾ ಪ್ರೇರಿಪಿಸುವುದಾಗಿರಬಹುದು ಅಥವಾ ಆಂಗ್ಲ ಭಾಷೆಯಲ್ಲಿ ಮಾತನಾಡದೆ ಕನ್ನಡ ಭಾಷೆಯಲ್ಲಿ ಮಾತನಾಡಿದರೆ ಅವರಿಗೆ ಬೈಯುವ ಮುಖೇನ ಹೆಚ್ಚು ಹೆಚ್ಚಾಗಿ ಆಂಗ್ಲ ಭಾಷೆಯಲ್ಲಿ ಮಾಡಿದರೆ ನಿನ್ನ ಭವಿಷ್ಯವು ಉತ್ತಮಗೊಳ್ಳುವುದು ಎಂಬುದಾಗಿ ಹೇಳುವುದು ಸರ್ವೆ ಸಾಮಾನ್ಯವಾಗಿಬಿಟ್ಟಿದೆ. ಆತಂಕದ ಸಂಗತಿಯೆಂದರೆ ಇದು ಇದೇ ರೀತಿಯಲ್ಲಿ ಮುಂದುವರೆದರೆ ಮುಂದೆ ಕನ್ನಡ ಭಾಷೆಯ ಸ್ಥಿತಿಯೂ ಯಾವ ಹಂತ ತಲುಪುದೋ ಎಂಬುದಾಗಿ ಭಯ ಮತ್ತು ಸಂಶಯ ಮೂಡದಿರಲು ಸಾಧ್ಯವಿಲ್ಲ.

ನಮ್ಮಲ್ಲಿ ಎಷ್ಟೋ ಜನರಿಗೆ ಕನ್ನಡ ಸಮಸ್ಯೆಗಳು ತಿಳಿದಿರುವುದಿಲ್ಲ. ಅವರ ಬದುಕೇ ದೊಡ್ಡ ಸಮಸ್ಯೆಯಾಗಿರುವಾಗ ಇತರ ವಿಷಯಗಳನ್ನು ತಿಳಿದುಕೊಳ್ಳಲು ಅಂಥವರು ಪ್ರಯತ್ನವನ್ನೂ ಮಾಡುವುದಿಲ್ಲ. ತಿಳಿಸುವ ಪ್ರಯತ್ನಗಳೂ ನಿರೀಕ್ಷಿತ ಪ್ರಮಾಣದಲ್ಲಿ ನಡೆಯುತ್ತಿಲ್ಲ. ಕನ್ನಡ ಭಾಷೆ ಮತ್ತು ಕನ್ನಡಿಗರ ಬದುಕಿಗೆ ಎದುರಾಗಿರುವ ಸವಾಲುಗಳನ್ನು ಅವಲೋಕಿಸಿದರೆ ದಿಗಿಲು ಹುಟ್ಟುತ್ತದೆ. ಶೈಕ್ಷಣಿಕವಾಗಿ ಕನ್ನಡವನ್ನು ಮೂಲೆಗುಂಪು ಮಾಡುವ ಹುನ್ನಾರಗಳು ವ್ಯವಸ್ಥಿತವಾಗಿ ನಡೆಯುತ್ತಿವೆ. ಕನ್ನಡ ಮಾಧ್ಯಮ ಶಾಲೆಗಳನ್ನು ಮುಚ್ಚಲು ರಾಜ್ಯ ಸರ್ಕಾರ ತೀರ್ಮಾನಿಸಿರುವುದೇ ಕನ್ನಡ ದೊಡ್ಡ ಅಪಾಯವನ್ನು ತಂದೊಡ್ಡಿದೆ. ಕನ್ನಡಿಗರ ಓದು ಮತ್ತು ಉದ್ಯೋಗವನ್ನು ಪಡೆಯುವ ಅವಕಾಶಗಳ ನಡುವೆ ಅಜಗಜಾಂತರ ಅಂತರವಿದೆ. ಶೇಕಡ 90ರಷ್ಟಿರುವ ಕನ್ನಡ ಮಾಧ್ಯಮ ಶಾಲೆಗಳಲ್ಲಿ ವ್ಯಾಸಂಗ ಮಾಡಿದ ಯುವಕ ಯುವತಿಯರು ನಿರುದ್ಯೋಗ ಸಮಸ್ಯೆಗೆ ತುತ್ತಾಗಿದ್ದಾರೆ. ಶೇಕಡ 5 ರಿಂದ 10ರಷ್ಟಿರುವ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಓದಿದವರು ಎಲ್ಲಾ ಬಗೆಯ ಉದ್ಯೋಗಗಳನ್ನು ಕಬಳಿಸುತ್ತಿದ್ದಾರೆ. ಇದರಿಂದಾಗಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರು ಕಂಗಾಲಾಗಿದ್ದಾರೆ. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ನಿಗಮ ಮಂಡಳಿ, ಪ್ರಾಧಿಕಾರಗಳು, ಖಾಸಗಿ ಶಿಕ್ಷಣ ಸಂಸ್ಥೆಗಳು, ಬ್ಯಾಂಕುಗಳು, ವಾಣಿಜ್ಯ ಸಂಸ್ಥೆಗಳು, ರೈಲ್ವೆ, ದೂರವಾಣಿ ಇತರೆ ಯಾವುದೇ ಇಲಾಖೆಗಳಲ್ಲಾಗಲಿ ಕನ್ನಡಿಗರಿಗೆ ಉದ್ಯೋಗ ದೊರೆಯುತ್ತಿಲ್ಲ, ಕೈತುಂಬಾ ಸಂಬಳ ನೀಡುವ ಮಾಹಿತಿ ತಂತ್ರಜ್ಞಾನ

ಕಂಪನಿಗಳು, ಬಹುರಾಷ್ಟ್ರೀಯ ಕಂಪನಿಗಳು ಕನ್ನಡೇತರರಿಗೆ ಮಣೆ ಹಾಕಲಾಗುತ್ತಿದೆ. ಈ ಎಲ್ಲ ಕಾರಣಗಳಿಂದ ಕನ್ನಡ ಸಂಸ್ಕೃತಿಗೂ ಆತಂಕ ಬಂದೊದಗಿದೆ. (ಲೋಹಿತ್, 2019).

ಒಮ್ಮೆ ರಾಷ್ಟ್ರಕವಿ ಕುವೆಂಪುರವರು ಎಂಟನೇ ತರಗತಿಯಲ್ಲಿ ವ್ಯಾಸಂಗ ಮಾಡುವಂತಹ ಸಂದರ್ಭದಲ್ಲಿ ಮೊಟ್ಟ ಮೊದಲ ಬಾರಿಗೆ ಆಂಗ್ಲ ಭಾಷೆಯಲ್ಲಿ ಒಂದು ಕವಿತೆಯನ್ನು ಬರೆದು ಅದನ್ನು ತಮ್ಮ ಅಧ್ಯಾಪಕರಿಗೆ ತೋರಿಸಿದಾಗ ಅದನ್ನು ಕಂಡ ಗುರುಗಳು ಪುಟ್ಟಪ್ಪನವರನ್ನು ಕುರಿತು ಈ ರೀತಿಯಾಗಿ ಹೇಳಿದರಂತೆ ಅಲ್ಲಪ್ಪಾ! ಪುಟ್ಟಪ್ಪ ಬೇರೆ ಭಾಷೆಯಾದ ಆಂಗ್ಲ ಭಾಷೆಯಲ್ಲಿ ಇಷ್ಟು ಅಂದವಾದ ಕವಿತೆಯನ್ನು ಬರೆದಿರುವ ನೀನು, ಇನ್ನು ನಿನ್ನ ಮಾತೃ ಭಾಷೆಯಲ್ಲಿ ಬರೆದಿದ್ದೇ ಆದರೆ ಇನ್ನು ಹೇಗೆ ಬರೆಯಬಲ್ಲೆ ಅಲ್ಲವೇ? ಎಂಬುದಾಗಿ ಪುಟ್ಟಪ್ಪನನ್ನು ಕುರಿತು ಆತನ ಜಾಣ್ಮೆಯನ್ನು ಗುರ್ತಿಸಿ ಆತನಿಗೆ ಕನ್ನಡ ಭಾಷೆಯಲ್ಲಿ ಬರೆಯಲು ಪ್ರೇರೇಪಣೆ ನೀಡಿದ ಕಾರಣದಿಂದಾಗಿ ಕೊನೆಗೂ ಅದನ್ನು ಅರಿತ ಕುವೆಂಪುರವರು ಮಾತೃ ಭಾಷೆಯಾದ ಕನ್ನಡದಲ್ಲಿ ಕೃತಿ ರಚನೆ ಮಾಡಲು ಮುಂದಾಗುತ್ತಾರೆ ಕೊನೆಗೆ ರಾಷ್ಟ್ರಕವಿಯಾಗಿ, ಜ್ಞಾನಪೀಠ ಪುರಸ್ಕೃತರಾಗಿ, ಕರುನಾಡಿನ ಹೆಮ್ಮೆಯಪುತ್ರ ಕನ್ನಡ ವರ್ಡ್ಸ್‌ವರ್ತ್, ಇನ್ನು ಇತರೆ ಸನ್ಮಾನಗಳಿಗೆ ಪಾತ್ರರಾದದ್ದು ಹೆಮ್ಮೆಯ ಸಂಗತಿಯಾಗಿದೆ ಇಂತಹ ಉದಾಹರಣೆಗಳು ನಮ್ಮಲ್ಲಿ ಹೆಚ್ಚಾಗಿ ದೊರೆಯುತ್ತದೆ ಇದನ್ನು ಮಕ್ಕಳಿಗೆ ತಿಳಿಯಪಡಿಸುವ ಮೂಲಕ ಅವರಲ್ಲಿ ಆಸಕ್ತಿಯನ್ನು ಮೂಡಿಸುವ ಪ್ರಯತ್ನವು ನಾವು ನೀವು ನಮ್ಮ ಸರ್ಕಾರವು ಕೈಜೋಡಿಸುವ ಮೂಲಕ ಅದು ಸಾಧ್ಯವಾಗುತ್ತದೆ ಇಲ್ಲವಾದಲ್ಲಿ ಕನ್ನಡ ಭಾಷೆಯೂ ಇಲ್ಲಿ ಪರಭಾಷೆಯ ಮೋಹದಿಂದಾಗಿ ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟು ಬಿಡಿತ್ತಿದೆಯೇ? ಎಂಬ ಆತಂಕಗಳು ಮನಸೂರೆಗೊಂಡಿವೆ ಎಂದರೂ ತಪ್ಪಾಗಲಾರದು. ಕನ್ನಡ ಭಾಷೆಯನ್ನು ಬೆಳೆಸುವ ಉಳಿಸುವ ಉತ್ತುಂಗಕ್ಕೆ ಏರಿಸುವ ಪ್ರಯತ್ನವನ್ನು ಮಾಡುವುದು ಪ್ರತಿಯೊಬ್ಬ ಕನ್ನಡಿಗರ ಆದ್ಯ ಕರ್ತವ್ಯವಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ಇಂಟರ್ ನ್ಯಾಷನಲ್ ವಿದ್ಯಾಸಂಸ್ಥೆಗಳ ಸಂಖ್ಯೆಯೂ ಹೆಚ್ಚಾಗಿದ್ದು ಕನ್ನಡ ಭಾಷೆಯೂ ಕೇವಲ ಒಂದು ಆಯ್ಕೆಯ ವಿಷಯವಾದ ಕಾರಣ ಬಹಳಷ್ಟು ಪೋಷಕರಾಗಿರಬಹುದು ಅಥವಾ ಇತರೆ ವ್ಯಕ್ತಿಗಳಾಗಿರಬಹುದು ಮುಂದಿನ ಭವಿಷ್ಯದ ಬಗ್ಗೆ ಆಲೋಚಿಸುವ ಮೂಲಕ ಕನ್ನಡ ಭಾಷೆಯನ್ನು ನಿರಾಕರಿಸುತ್ತಿರುವವರು ಕೂಡ ಇತ್ತೀಚೆಗೆ ನಮ್ಮಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ. ಇದಕ್ಕೆ ತಕ್ಷಣ ಸರ್ಕಾರವು ಕಡಿವಾಣವನ್ನು ಹಾಕುವ ಮೂಲಕ ಕರ್ನಾಟಕ ರಾಜ್ಯದಲ್ಲಿ ಪ್ರಥಮ ಭಾಷೆಯನ್ನಾಗಿ ಈಗಾಗಲೇ ಮಾಡಿದೆ ಆದರೂ ಇತರೆ ವಿದ್ಯಾಸಂಸ್ಥೆಗಳಿಲ್ಲಿಯೂ ಕೂಡ ಕನ್ನಡ ಭಾಷೆಯನ್ನು ಪ್ರತಿಯೊಬ್ಬರು ಪ್ರಥಮ ಭಾಷೆಯನ್ನಾಗಿ ಸ್ವೀಕರಿಸಬೇಕು ಎಂಬ ಆಜ್ಞೆಯನ್ನು ಮಾಡುವುದು ಅತ್ಯವಶ್ಯಕವಾಗಿದೆ.

ಪ್ರತಿವರ್ಷ ಕನ್ನಡಿಗರಾದ ನಾವು ನವೆಂಬರ್ ಒಂದರಂದು ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದರೆ ಸಾಲದು, ಕನ್ನಡ ಭಾಷೆಯ ಬಗ್ಗೆ ನಮ್ಮ ಬರಗೂರು ರಾಮಚಂದ್ರಪ್ಪನವರು ಹೇಳಿರುವಂತೆ ಕನ್ನಡದ ಕೂಗು ಕೇವಲ ಕೊರಳಿನ ಕೂಗಾಗದೆ, ಕರುಳಿನಿಂದ ಬಂದ ಕೂಗಾಗಬೇಕು ಪ್ರತಿಯೊಬ್ಬ ಕನ್ನಡಿಗನೂ ಕೂಡ ಕರ್ನಾಟಕ ರಾಜ್ಯದಲ್ಲಿ ಕನ್ನಡ ಭಾಷೆಯಲ್ಲಿ ಮಾತನಾಡಬೇಕು ಅದು ತಾಯ್ನಾಡಿನ ಭಾಷೆ ಎಂವ ಹೆಮ್ಮೆ ಪ್ರತಿಯೊಬ್ಬರಲ್ಲೂ ಮೂಡಬೇಕೇ ಹೊರತು ಆಂಗ್ಲ ಭಾಷೆಯಲ್ಲಿ ಪರಭಾಷೆಗೂ ಗೌರವವನು ಸಲ್ಲಿಸೋಣ ಆದರೆ ವ್ಯವಹಾರದ ದೃಷ್ಟಿಯಲ್ಲಿ ಇತರೆ ಭಾಷೆಯನ್ನು ಬಳಸುವುದು ಅತ್ಯಂತ ಕಡಿಮೆ ಆಗಿಯಲಿ. ಆದರೆ ಕನ್ನಡ ಭಾಷೆಯೂ ಕರ್ನಾಟಕ ರಾಜ್ಯದಲ್ಲಿ ರಾರಾಜಿಸುವಂತೆ ಮಾಡಬೇಕು ಎಂಬುದೇ ನನ್ನಯ ಆಶಯವಾಗಿದೆ.

**ಉಪಸಂಹಾರ**

ಕರ್ನಾಟಕ ರಾಜ್ಯದಲ್ಲಿ ಕನ್ನಡ ಭಾಷೆಗೆ ಮೊದಲ ಆದ್ಯತೆಯನ್ನು ನೀಡಿವುದರ ಮೂಲಕ ಪ್ರಥಮ ಭಾಷೆಯಾಗಿ ಕನ್ನಡವನ್ನು ಪ್ರತಿಯೊಂದು ವಿಭಾಗದ ಅಂದರೆ ಬೇರೆ ಹೊರ ರಾಜ್ಯಗಳಿಂದ ಬಂದು ಬೆಂಗಳೂರಿನಲ್ಲಿ ನೆಲೆಗೊಂಡು ಓದಲು ಇಚ್ಛಿಸುವುವವರು ಕೂಡ ಕನ್ನಡ ಭಾಷೆಯನ್ನು ಕಲಿಯುವಂತೆ ಕಡ್ಡಾಯಗೊಳಿಸಬೇಕು ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿರುವ ಎಲ್ಲಾ ಅಂಗಡಿ ಮುಂಗಟ್ಟುಗಳಲ್ಲಿ ಮೊದಲಿಗೆ ಕನ್ನಡ ಭಾಷೆಯಲ್ಲಿಯೇ ನಾಮ ಫಲಕಗಳು ರಾರಾಜಿಸುವಂತೆ ಮಾಡಬೇಕು ಮಮ್ಮಿ– ಡ್ಯಾಡಿ ಬೇಡ, ಅಪ್ಪ–ಅಮ್ಮ ಎಂಬುದನ್ನು ಕಲಿಸಬೇಕು. ವ್ಯಾಪಾರದ ದೃಷ್ಟಿಯಿಂದ ಮಾತ್ರ ಇತರೇ ಭಾಷೆಗಳನ್ನು ಸೀಮಿತವಾಗಿ ಬಳಸುವಂತೆ ಮಾಡಿ ಕನ್ನಡ ಭಾಷೆಯಲ್ಲಿ ಪ್ರತಿಯೊಬ್ಬರು ಹೆಮ್ಮೆಯಿಂದ ಮಾತನಾಡುವಂತೆ ಪ್ರೋತ್ಸಾಹವನ್ನು ತುಂಬಬೇಕು ಸರ್ಕಾರಿ ಶಾಲೆಗಳನ್ನು ಉಳಿಸುವುದರ ಜೊತೆಗೆ ಖಾಸಗಿ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯ ಮಾಡಬೇಕಾಗಿದೆ. ಬೆಂಗಳೂರಿನಲ್ಲಿ ಮಾತ್ರವಲ್ಲದೇ ಇಡೀ ಕರ್ನಾಟಕ ರಾಜ್ಯದ ಜನರ ಬಾಯಿಯಲ್ಲಿ ಮುತ್ತಿನ ಹರಳಿನಂತೆ ಕನ್ನಡ ಭಾಷೆಯೂ ಹರಿದಾಡುವಂತಾಗಲಿ.

ರಾಷ್ಟ್ರಕವಿ ಕುವೆಂಪುರವರು ಹೇಳುವಂತೆ ಪ್ರತಿಯೊಬ್ಬರೂ ವಿಶ್ವಮಾನವರಾಗಿ ವಿಶ್ವಕ್ಕೆ ಮಾದರಿಯಾಗಿ ಕನ್ನಡ ಭಾಷೆಯನ್ನು ಉಳಿಸುವ ಬೆಳೆಸುವ ಕೆಲಸವನ್ನು ಮಾಡಬೇಕು ನಮ್ಮ ಭಾಷೆಯನ್ನು ಮನೆಯೊಳಗೆ ಮನೆಯವರು ಸಂತೋಷದಿಂದ ಹಿರಿಮೆಯಿಂದ ಬಳಸಿದಾಗ ವರ್ತಮಾನದ ಆತಂಕಗಳು ಚೆದುರಿ ಓಡುವುದರಲ್ಲಿ ಸಂಶಯವಿಲ್ಲ ಎಂಬುದು ನನ್ನ ಅನಿಸಿಕೆಯಾಗಿರುತ್ತದೆ. ನನ್ನ ಸ್ವರಚಿತ ಕವನದೊಂದಿಗೆ ವಿಷಯವನ್ನು ಮುಕ್ತಾಯಗೊಳಿಸಲು ಇಚ್ಛಿಸುತ್ತೇನೆ.

*ಹುಟ್ಟುವುದಾದರೆ ಹುಟ್ಟಬೇಕು ಭಾರತದಲ್ಲಿ*
*ಬೆಳೆಯುವುದಾದರೆ ಬೆಳೆಯಬೇಕು ಕನ್ನಡ ನಾಡಿನಲ್ಲಿ*
*ಮೊದಲಲ್ಲಿ ನೀಡಬೇಕು ಕನ್ನಡಕ್ಕೆ ಆದ್ಯತೆ*
*ಕಲಿಯಬೇಕು ಶಿಕ್ಷಣ ಕನ್ನಡದಲ್ಲಿ*
*ಶೀಘ್ರದಲ್ಲಿ ತೊಲಗಲಿ*
*ಪರಭಾಷೆಗಳ ವ್ಯಾಮೋಹವು*
*ಕನ್ನಡ ಉಳಿಯಲಿ*
*ಕನ್ನಡ ಬೆಳೆಯಲಿ*
*ಕನ್ನಡ ಬಳಸಲಿ*
*ಸರ್ವರೂ ಬಾಳಲಿ ಸದಾಕಾಲ ಆನಂದದಲಿ.*

ದ್ರಾವಿಡ ಭಾಷೆಗಳಲ್ಲಿ ಒಂದಾದ ಹಾಗೂ ಭಾರತದೇಶದ ಪುರಾತನ ಭಾಷೆಗಳಲ್ಲಿ ಕನ್ನಡ ಭಾಷೆಯೂ ಪ್ರಮುಖವಾದುದಾಗಿದ್ದು, ಪ್ರಪಂಚದ ಮೂರನೇ ಪುರಾತನ (ಶಾಸ್ತ್ರೀಯ) ಭಾಷೆ (**Kannada is the third oldest language of world** ) ಎಂಬುದು ಸಂತಸದ ಸಂಗತಿ ಆದರೆ ಉಳಿಸುವ ಪ್ರಯತ್ನ ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಆಮೂರ ಜಿ.ಎಸ್. (2014). ಕನ್ನಡ ಕಥನ ಸಾಹಿತ್ಯ. ಸಪ್ನ ಬುಕ್ ಹೌಸ್, ಬೆಂಗಳೂರು.
- ಲೋಹಿತ್.ಪಿ. (2019). ಕನ್ನಡ ಭಾಷೆ ಮತ್ತು ಶಿಕ್ಷಣ ಮಾಧ್ಯಮ: ವರ್ತಮಾನದ ಆತಂಕಗಳು. ಪ್ರತಿಬಿಂಬ: ಬಹುಶಿಸ್ತೀಯ ಕನ್ನಡ ಸಂಶೋಧನಾ ನಿಯತಕಾಲಿಕೆ, ಸಂ.1 (2). ಪು.ಸಂ.10–15.
- ಪ್ರಶಾಂತ ನಾಯಕ ಜಿ. (2013). ಕನ್ನಡ ಭಾಷೆ: ಸಮಕಾಲೀನ ಸಮಸ್ಯೆಗಳು. ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.
- ರಂಗನಾಥ ರಾವ್ ಜಿ.ಎಸ್(ಡಿಸೆಂಬರ್ 16, 2018). ಶಿಕ್ಷಣ ಮಾಧ್ಯಮ ಮತ್ತು ಗುಣಮಟ್ಟ. ವಾರ್ತಾಭಾರತಿ ದಿನಪತ್ರಿಕೆ, ಮಂಗಳೂರು.
- ಮುಗಳಿ. ರಂ.ಶ್ರೀ. (2018). ಕನ್ನಡ ಸಾಹಿತ್ಯ ಚರಿತ್ರೆ. (ಪರಿಷ್ಕೃತ), ಗೀತಾ ಬುಕ್ ಹೌಸ್, ಮೈಸೂರು.